# 8

# ಗೌರವಯುತವಾದ ಸ್ಥಾನ

## (2 ಕೊರಿಂಥ 8:1-9:15)

*"ಪಾರುಪತ್ಯಮಾಡುವ ಈ ದ್ರವ್ಯ ಸಂಚಯದ ವಿಷಯದಲ್ಲಿ ಒಬ್ಬರು ನಮ್ಮ ಮೇಲೆ ತಪ್ಪು ಹೊರಿಸುವುದಕ್ಕೆ ಅವಕಾಶವಿರಬಾರದು" (8:20).*

ಇಂದು ಸ್ಥಳೀಯ ಸಭೆಯ ಜೀವಿತದಲ್ಲಿ ಚರ್ಚಿನ ಹಣಕಾಸಿನ ಯಾವುದೇ ನಿರ್ಧಾರವು ಒಂದು ಅಥವಾ ಎರಡು ಪ್ರತಿಕ್ರಿಯೆ ಹೊಂದುವ ಸಾಧ್ಯತೆ ಇರುತ್ತದೆ. ಒಂದು ಜವಾಬ್ದಾರಿಯಲ್ಲಿ, ಹಣಕ್ಕೋಸ್ಕರದ ಚರ್ಚಿನ ನಿರಂತರವಾದ ಮನವಿಗಾಗಿನ ಅಸಮಧಾನವನ್ನು ಕಾಣುವ ಸಾಧ್ಯತೆಯು ಕಂಡುಬರುವುದಾಗಿದೆ. ಇತರ ಜವಾಬ್ದಾರಿಯು ಅಸಮಧಾನಕ್ಕಿಂತ ಹೆಚ್ಚಾಗಿ ಬೇಸರತರುವುದಾಗಿದೆ. ಈ ದೃಷ್ಟಿಯ ಪ್ರಕಾರ, ಅಯವ್ಯವಯದ ಯಾವುದೇ ಸಾರ್ವಜನಿಕ ನಿರ್ಧಾರವು ಚರ್ಚಿನ ಬಲು ಮಹತ್ವಕ್ಕೆ ಸಂಬಂಧಿಸಿದಂತೆ ಇರುವವಗಳಲ್ಲಿ ವರ್ಜಿಸುವಂತದ್ದು ಮತ್ತು ಅನವಶ್ಯಕವಾಗಿ ಹಸ್ತಕ್ಷೇಪಮಾಡುವಂತದ್ದು ಆಗಿದೆ. ಚರ್ಚಿನ ಹಣಕಾಸಿನ ಹಿಂದೆ ಎರಡೂ ಪ್ರತಿಕ್ರಿಯೆಗಳ ಯಾವುದೇ ಚರ್ಚೆಯಲ್ಲಿ ಹೇಳದಂತಹ ಕಲ್ಪನೆಗಳು ಇವೆ: ಚರ್ಚಿನ ಹಣಕಾಸಿನ ಸಮಿತಿಯವರು ಹಣ ಮತ್ತು ಅಯವ್ಯಯ ಸಂಗತಿಗಳಂತಹ ಲೌಕಿಕ ಸಂಗತಿಗಳಲ್ಲಿ ಆಸಕ್ತಿಯುಳ್ಳವರೂ ಆಗಿದ್ದು ಉತ್ತಮವೂ ಮತ್ತು ಅಪಾಯವನ್ನು ಮಾಡದ ಮೋಜುಗಾರರೂ ಆಗಿರುತ್ತಾರೆ. ಈ ದೃಷ್ಟಿಯ ಪ್ರಕಾರ, ಹಣ ಮತ್ತು ಅಯವ್ಯಯಗಳು ಚರ್ಚಿನ ಸೇವೆಯೊಡನೆ ಅಲ್ಪವಾದ ಸಂಬಂಧವನ್ನು ಹೊಂದಿದೆ.

ಎರಡನೆಯ ಕೊರಿಂಥವು, ಪೌಲನ ಸೇವೆಯ ಸಮರ್ಥನೆಯು ಮೂಲತವಾಗಿ ಪತ್ರಿಕೆಯ ಸಂಗ್ರಹದ ಮೇಲಿನ ಎರಡು ಅಧ್ಯಾಯಗಳನ್ನು ಹೊಂದಿಕೊಂಡಿವೆ. ವಾಸ್ತವವಾಗಿ ಈ ಸಂಗ್ರಹವು ಆತ ಸಮಸ್ತ ಸೇವೆಯಲ್ಲಿಯೇ ಬಹು ಮುಖ್ಯವಾದ ಒಡಂಬಡಿಕೆಯು ಆಗಿತ್ತು. ಆತನ ಸೇವೆಯ ಆರಂಭದಲ್ಲಿ, ಆತನು ಯೆರೂಸಲೇಮಿನ ಬಡವರಿಗಾಗಿ ಧನವನ್ನು ಸಂಗ್ರಹಿಸುವಲ್ಲಿ ತನ್ನನ್ನು ಒಪ್ಪಿಸಿಕೊಂಡಿದ್ದನು (ಗಲಾತ್ಯ 2:10). ನಂತರ ಆತನು ಆ ಸಂಗ್ರಹವನ್ನು ವಿವರವಾಗಿ ಕೊರಿಂಥದವರಿಗೆ ಬರೆದ ಮೊದಲ ಪತ್ರಿಕೆಯಲ್ಲಿ ಸೂಚಿಸುವವನಾಗಿದ್ದಾನೆ (16:1, 2). ನಂತರದಲ್ಲಿ ಆತನ ಜೀವಿತದ ತಿರುವಿನ ಬಗೆಗೆ ಆತನು ರೋಮಾಪುರದವರಿಗೆ ಪತ್ರವನ್ನು ಬರೆಯುವಾಗ (ರೋಮಾಪುರ 15:22-29), ಅನೇಕ ವರ್ಷಗಳು, ಸಾಗಿಹೋದವು, ಮತ್ತು ಸಂಗ್ರಹವು ಯೆರೂಸಲೇಮಿನಲ್ಲಿ ಇನ್ನೂ ಹಂಚಲ್ಪಡಲಿಲ್ಲ ಆದರೆ ಪೌಲನು ಅದನು ಬಿಡುಗಡೆ ಮಾಡುವುದನ್ನು ಬಿಟ್ಟುಬಿಡಲಿಲ್ಲ, ಇದೊಂದು ಆತನ ಜೀವಿತದ ಮಹತ್ವದ ಯೋಜನೆಯು ಆಗಿತ್ತು. ಯೆರೂಸಲೇಮಿಗೆ ಸಂಗ್ರಹವನ್ನು ತರುವಲ್ಲಿನ ಆತನ ವೈಯಕ್ತಿಕ ಸುರಕ್ಷತೆಗಾಗಿ ಆತನು ಗಂಡಾತರವನ್ನು ಒಪ್ಪಿಕೊಂಡಿದ್ದನು.

ಸಂಗ್ರಹವು ಕೂಡಲು ಪೌಲನಿಗೆ ಅನೇಕ ಅವಧಿಯನ್ನು ತೆಗೆದುಕೊಂಡದ್ದರಿಂದ, ಆತನು ಪ್ರತ್ಯಕ್ಷವಾಗಿ ಆತನು ಕೇವಲ ಬರಗಾಲ ಪರಿಹಾರದ ಬಗೆಗೆ ಆಸಕ್ತಿಯುಳ್ಳವನಾಗಿದ್ದನು. ಯೆಹೂದಿ ಸಭೆಗಳ ಪ್ರಯೋಜನಾರ್ಥಕವಾಗಿ ಅನ್ಯ ಸಭೆಗಳಿಂದ ಬರುವ ಹಣವು, ಸಭೆಗಳ ಐಕ್ಯತೆಯ ಸಂಕೇತವಾಗಿತ್ತು. ಇದು ತ್ಯಾಗದ, ಪ್ರೀತಿಯ ಮತ್ತು ಚರ್ಚಿನ ಆಧ್ಯತೆಯ

ಚಿಹ್ನೆಯಾಗಿತ್ತು. ಪೌಲನಿಗೆ ಹಣದ ಬಗೆಗೆ ಮಾತನಾಡುವಾಗ ಯಾವ ಹಿಂಜರಿತವು ಇರಲಿಲ್ಲ. ಹಣವು ನಮ್ಮನ್ನು - ನಮ್ಮ ಶ್ರಮವನ್ನು ಮತ್ತು ನಮ್ಮ ಪ್ರೀತಿಯನ್ನು ಪ್ರತಿನಿಧಿಸುವುದಾಗಿದೆ ಆತನು ತಿಳಿದಿದ್ದನು. ನಮ್ಮ ಹಣವನ್ನು ನಾವು ವಿನಿಯೋಗಿಸುವ ರೀತಿಯು ಜೀವಿತದಲ್ಲಿ ಯಾವ ಸಂಗತಿಯು ನಮಗೆ ಮಹತ್ವವಾದವು ಎಂದು ಸೂಚಿಸುವುದಾಗಿದೆ. ಯೆರೂಸಲೇಮಿನ ಸಭೆಗಳಿಗೋಸ್ಕರ ಅನ್ಯಸಭೆಗಳು ತ್ಯಾಗ ಮಾಡಿದ್ದರೆ, ಅವುಗಳು ತಮ್ಮ ಯೋಗಕ್ಷೇಮದ ಬಗೆಗೆ ಸಂಬಂಧಿಸಿದ ಸ್ಪಷ್ಟ ಸಂದೇಶವನ್ನು ಕಳಿಸಬಹುದಾಗಿದೆ.

ವಿಶೇಷವಾಗಿ 2 ಕೊರಿಂಥದಲ್ಲಿನ ಆರ್ಥಿಕ ನೆರವಿಗಾಗಿನ ಬಲವಾದ ಗುರುತರವಾದ ಮನವಿಯಲ್ಲಿ, ಪುಸ್ತಕದ ಹೆಚ್ಚಿನ ಭಾಗವು ಪೌಲನ ಪ್ರಾಮಾಣಿಕತೆಯು ಪ್ರಶ್ನಿಸಲ್ಪಟ್ಟದ್ದನ್ನು ಸೂಚಿಸುವುದಾಗಿದೆ. ತನ್ನ ಕೆಲಸಕ್ಕಾಗಿ ಕೊರಿಂಥದವರಿಂದ ಯಾವುದೇ ಹಣವಿಲ್ಲದಿರುವುದನ್ನು ಒಪ್ಪಿರುವದು (11:7-11) ಸಂಶಯಕ್ಕೆ ಎಡೆಮಾಡಿರುವುದಾಗಿದೆ ಕೆಲವರು ಪರಿಗಣಿಸುವವರಾಗಿರುತ್ತಾರೆ. ಕೊರಿಂಥ ಸಭೆಗೆ ಭಾರವಾಗಿರುವದಕ್ಕಿಂತ ಇತರ ಸಭೆಗಳ ಮೇಲೆ ಬಯಕೆಯನ್ನೂ ಮತ್ತು ಆತುಕೊಳ್ಳುವಿಕೆಯನ್ನು ಆತನು ತಾನೇ ಆರಿಸಿಕೊಂಡಿದ್ದನು (11:9). ಹಾಗಿದ್ದಾಗ್ಯೂ, ಹಣದ ಬಗೆಗೆ ಮಾತನಾಡಲು ಆತನಿಗೆ ಸಮಯವೂ ಬಂದಿತು (8:10). ಆತನು ತನ್ನ ಜೀವಿತದ ದೊಡ್ಡ ಯೋಜನೆಗೋಸ್ಕರವಾಗಿ ಆತನು ತನ್ನ ಮನವಿಯನ್ನು 8 ಮತ್ತು 9ನೇಯ ಅಧ್ಯಾಯಗಳಲ್ಲಿ ಮಾಡಿದನು. ಬಹುಶಃ ಈಗ ವಿಷಯವನ್ನು ತಿರುಗಿಸುವವನಾಗಿದ್ದಾನೆ ಯಾಕೆಂದರೆ ಕೊರಿಂಥದವರಿಗೆ ಹಣವನ್ನು ಕೇಳುವಲ್ಲಿ ಯಥೇಚ್ಛವಾದ ನಂಬಿಕೆಯು ಆತನಲ್ಲಿ ತುಂಬಿಕೊಂಡಿತ್ತು. ಸಂಗ್ರಹವು, ವಿತರಣೆಯು ಮತ್ತು ದಾಖಲೆಗಳು ಇಡುವದು ಈ ಸಂಗತಿಗಳು ಹಲವು ಬಾರಿ ಆತನ ಸೇವೆಗೆ ಅವಶ್ಯಕವಾಗುವ ಬದಲು ತೊಂದರೆದಾಯಕವೂ ಅನವಶ್ಯಕವೂ ಆಗಿ ಪರಿಣಮಿಸುವವುಗಳು ಆಗಿದ್ದವು.

## ಮಾದರಿಯ ಚರ್ಚು (8:1-6)

ಯೋಗ್ಯವಾದ ಮಾದರಿಯನ್ನು ಹೊಲುವುದರಿಂದ ನಾವು ಹಲವು ಬಾರಿ ಪ್ರಯೋಜನವನ್ನು ಹೊಂದುವವರಾಗಿದ್ದೇವೆ. ಒಬ್ಬ ಕ್ರೈಸ್ತನು ಕ್ರೈಸ್ತಮಿಶನರಿಯು ಮಾದರಿಯಾಗಿ ಸೇವೆ ಮಾಡುವವನು ಮತ್ತು ಸೇವೆಯ ಅರ್ಥವನ್ನ ವಿವೇಕವನ್ನಾಗಿ ಒದಗಿಸುವವನೂ ಆಗಿದ್ದಾನೆ. ಅದೇ ರೀತಿಯಲ್ಲಿ, ಅಧಿಕೃತ ಸೇವೆಗೆ ಸಂಪೂರ್ಣ ಸಭೆಯು ಸಮಾಲನ್ನು ಹಾಕಬಹುದಾಗಿದೆ. ಯಾವ ಸೇವೆಯು ಉತ್ತಮ ಸೇವೆಗೆ ನಮ್ಮನ್ನು ಪ್ರಚೋದಿಸುವ ಸಾಧ್ಯತೆಯನ್ನು ಹೊಂದಿದೆ ಎಂಬುದನ್ನು ಅದು ತೋರಿಸಬಹುದಾಗಿದೆ. 8:1-6ರಲ್ಲಿ, ಮೆಕೆದೋನ್ಯ ಸಭೆಯು ಕೊರಿಂಥ ಮತ್ತು ರೋಮಾ ಸಭೆಗಳಿಗಾಗಿ (ಹೋಲಿಸಿ ರೋಮಾಪುರ 15:26) ಉದಾರತೆಗೆ ಮಾದರಿಯಾಗಿತ್ತು (8:2). ಅವುಗಳು, ಇತರ ಸಭೆಗಳಂತೆ "ಸಂತಾಪದ ಪರೀಕ್ಷೆಯ" ಅನುಭವವನ್ನು ಹೊಂದಿದ್ದವು (ಹೋಲಸಿ 1:7; 1 ಥೆಸಲೋನಿಕ 1:6; 2:14). ಪರೀಕ್ಷೆಯಲ್ಲಿ ಗುರುತರವಾದ ರೀತಿಯಲ್ಲಿ ಸಾಗಿಹೋದ ಮೆಕೆದೋನ್ಯರು ಎಂಥ ಅಸಾಧಾರಣರಾಗಿದ್ದರು.

ಮೆಕೆದೋನ್ಯ ಸಭೆಯು ಪ್ರಚಲಿತ ಪೀಳಿಗೆಗೂ ಯೋಗ್ಯವಾದ ಮಾದರಿಯನ್ನು ಒದಗಿಸುವುದಾಗಿದೆ. ತಮ್ಮ "ಕಡುಬಡತನದಲ್ಲೂ" ಅವರು "ಔದಾರ್ಯದ ಸಂಪತ್ತಿನಿಂದ" ತುಂಬಿತುಳುಕುವ ಅವರ ತೀವ್ರಗೊಂಡ ಅವರ ಒಪ್ಪಿಸಿಕೊಳ್ಳುವಿಕೆಯಿಂದ ನಾವು ಪ್ರಭಾವಿತರಾಗುತ್ತೇವೆ (8:2). ಅವರು "ತಮ್ಮ ಶಕ್ತಿಯನ್ನು ಮೀರಿ" ಕೊಟ್ಟರು (8:3). ಬಡತನವಿದ್ದಾಗಲೂ ಕೂಡಾ ಸಭೆಯು ಉದಾರವಾಗಿ ವಿಪುಲವಾಗಿ ಕೊಡುತ್ತಿದ್ದು ಸ್ವಾಭಾವಿಕವಾಗಿ ಚಕಿತಗೊಳಿಸುವುದಾಗಿದ್ದು ಅವರು ಉದಾರವಾಗಿ ಕೊಡುವುದಕ್ಕೆ ಹೇಗೆ ಪ್ರೇರಿತರಾಗುತ್ತಿದ್ದರು ಎಂದು ಆಶ್ಚರ್ಯಚಿತರಾಗುತ್ತೇವೆ. ಮೆಕೆದೋನ್ಯದ ಕ್ರೈಸ್ತರ ಬಡತನವು ಅವ ಕ್ರೈಸ್ತೀಯ ಒಡಂಬಡಿಕೆಯ ಫಲ ಎಂದು ಕೆಲವರು ಸೂಚಿಸುತ್ತಾರೆ. ಬಹಶಃ ಕೆಲವರು ತಮ್ಮ ಕೆಲಸವನ್ನು ಕಳೆದುಕೊಂಡರು ಮತ್ತು ಆದಾಯದ ಮೂಲವು ಅವರ ಕ್ರಿಸ್ತೀಯ

ಒಡಂಬಡಿಕೆಯಿಂದಲೇ ಆಗಿತ್ತು. ಹಾಗಿದ್ದಾಗ್ಯೂ ಅವರು ಉದಾರವಾಗಿ ಕೊಟ್ಟರು.

"ಉದಾರತೆ" ಗಾಗಿನ (*haplotes* 8:2) ಪೌಲನ ಪದದ ಅಕ್ಷರ ಸಹ ಅರ್ಥವು "ದೃಢ ಸಂಕಲ್ಪ" ಎಂದಾಗಿದೆ. ಯಾವುದೇ ಮಿಶ್ರಿತ ಪ್ರೇರಣೆಗಳಿಲ್ಲದವನು ಎಂದು "ಹೃದಯದ ದೃಢ ಸಂಕಲ್ಪ" ಪದವು ಸೂಚಿಸುವುದಾಗಿದೆ (ಹೋಲಿಸಿ ಕೊಲಸ್ಸೆ 3:22; ಎಫೆಸ 6:5). ಹಣವನ್ನು ಕೊಡುವುದಕ್ಕೋಸ್ಕರವಾಗಿ ಈ ಪದವು ಉಪಯೋಗವಾಗುವಾಗ ಕೇವಲ ಒಂದು ಆಧ್ಯತೆಯನ್ನು ಹೊಂದಿದವನ "ಉದಾರತೆಯ" ಬಗೆಗೆ ಸೂಚಿಸುವುದಾಗಿದೆ (ಹೋಲಿಸಿ ರೋಮಾಪುರ 12:8). ಮೆಕೆದೋನ್ಯರು ತಮ್ಮ ಕಡುಬಡತನದಲ್ಲೂ ಯಾಕೆ ಉದಾರವಾಗಿ ಕೊಡುವವರಾಗಿದ್ದರು ಎಂದು ಪದ ಸೂಚಿಸುವುದಾಗಿದ್ದು: ಅವರ "ಹೃದಯದ ದೃಢ ಸಂಕಲ್ಪವು ವಿಭಾಗವಾಗಲಿಲ್ಲ." ಹಣವನ್ನು ಕೊಡುವದು ಅವರ ಜೀವನದ ಆಧ್ಯತೆಯ ಮೇಲೆ ಪ್ರತಿಬಿಂಬಿಸುವುದಾಗಿದೆ. ಹೀಗೆ ಮೆಕೆದೋನ್ಯರು ನಮಗೆ ಮಾದರಿಯಾಗಿದ್ದಾರೆ ಮತ್ತು ಹೊಸ ಸಂಗತಿಯ ಅವಶ್ಯಕತೆಗಾಗಿ ಇಟ್ಟುಕೊಳ್ಳುವ ಇಚ್ಛೆ ಮತ್ತು ಕಟ್ಟುಬೀಳುವಿಕೆ ಇವುಗಳ ಮಧ್ಯ ವಿಭಾಗವಾಗಿರುತ್ತದೋ ಅವರು ಸಮೃದ್ಧಿಯ ಜೊತೆಗಿನ ಸಂಬಂಧದಿಂದಾಗಿ ಇವುಗಳನ್ನು ಉದಾರವಾಗಿ ಕೊಡುವುದಕ್ಕೆ ಅಸಾಧ್ಯವಾಗಿರುವದು ಕಂಡುಬರುತ್ತವೆ. ಯಾರು "ಏಕ ಮನಸ್ಸುಳ್ಳವರಾಗಿರುತ್ತಾರೋ" ಅವರು ಬಡತನದಿಂದಿರುವಾಗಲೂ ಕೊಡುವವರಾಗಿರುತ್ತಾರೆ.

ಹುಮ್ಮನಸ್ಸಿನಿಂದ ಕೊಡುವಿಕೆಯಲ್ಲಿನ ನಮ್ಮ ವಿಫಲತೆಯು ನಾವು ಮಾತನಾಡುವ ವಾಸ್ತವಗಳಾದ, ಆಯವ್ಯಯ, ಕಾರ್ಯಕ್ರಮ, ಋಣತೀರಿಸುವ ಜೀತ, ಮತ್ತು ಹಣಕಾಸಿನ ಆಭಾರ ಅದೆ ರೀತಿಯಲ್ಲಿ ನಾವು ಯಾವುದೇ ಹಣಕಾಸಿನ ಉನ್ನತಿಯನ್ನು ವರ್ಣಿಸಬಹುದು. ಈ ಭಾಷೆಯ ಸಭೆಯ ಹಣಕಾಸಿನ ವಿಚಾರವು "ದೈವಿಕವಲ್ಲದ" ಸಂಗತಿಗಳು ಎಂದು ಯೋಚಿಸುವತ್ತ ನಡೆಸುವವುಗಳು ಆಗಿವೆ. ಆದಿ ಸಭೆಯು ತಮ್ಮ ಕೊಡುವಿಕೆಯನ್ನು ವರ್ಣಿಸಲು ಸಾಮಾನ್ಯವಾದ ಆರ್ಥಿಕ ಭಾಷೆಯನ್ನು ಎಂದಿಗೂ ಬಳಸುತ್ತಿದ್ದಿಲ್ಲ ಎಂಬುದಕ್ಕೋಸ್ಕರ ಆದಿ ಸಭೆಯಿಂದ ನಾವು ಇದರ ಮೇಲೆ ಮೌಲ್ಯಾತ್ಮಕ ಪಾಠಗಳನ್ನು ಕಲಿಯಬಹುದಾಗಿದೆ. ಮೆಕೆದೋನ್ಯರು "ದೇವ ಜನರಿಗೆ ಸಹಾಯ ಮಾಡುವ ಕೆಲಸದಲ್ಲಿ ತಾವು ಪಾಲುಗಾರರಾಗುವಂತೆ ಅಪ್ಪಣೆ ಕೊಡಲು" (8:4) NIVಯಲ್ಲಿ, ಕೇಳಿಕೊಂಡದ್ದು ನಿರ್ದಿಷ್ಟವಾಗಿ ಪರಿಣಾಮಕಾರಿಯಾದದ್ದಾಗಿದೆ. ಸಂಗ್ರಹವು ಕೇವಲ ಹಣಕಾಸಿನ ಅಭಾರವಾಗಿರಲಿಲ್ಲ; ಅದು "ದೇವ ಜನರಿಗೆ ಸಹಾಯಮಾಡುವ"ದನ್ನೂ ಕೂಡ ಅದು ಒಳಗೊಂಡಿದೆ. "ಸಹಾಯ ಮಾಡುವದು" ಅಥವಾ "ಸೇವೆಮಾಡುವದು" ಎಂಬುದರ ಗ್ರೀಕ್ ಪದದ ಭಾಷಾಂತರವು "ಸೇವೆಗಾಗಿ" (NIV; NEB) ಸಾಮಾನ್ಯನಾಗಿ ಹೊಸ ಒಡಂಬಡಿಕೆಯಲ್ಲಿ ಬಳಕೆಯಾದ *diakoniat* ಎಂಬ ಪದ ಆಗಿದೆ.

"ಸೇವೆಯು" ಹೊಸ ಒಡಂಬಡಿಕೆಯಲ್ಲಿ ಮಹತ್ವದ ಪದವಾಗಿದೆ. ಮೂಲತವಾಗಿ, ದೀನಾಭಾವದ ಕೃತ್ಯವನ್ನು ಸೂಚಿಸುವುದಾಗಿದೆ: ಅದು ಊಟದ ಮೇಜಿನ ಬಳಿ ಮತ್ತು ಆಹಾರ ಬಡಿಸುವುದಕ್ಕೊಸ್ಕರ ಕಾಯುವದು. ಮತ್ತು ಆಳು ಹೇಗೆ ತನ್ನ ಯಜಮಾನನಿಗೋಸ್ಕರ ಜೀವಿಸುವಂತೆ ಇತರರಿಗಾಗಿ ಜೀವಿಸುವುದನ್ನುಇದು ಒಳಗೊಂಡಿದೆ. ಯೇಸುವು ಸೇವಕನಂತೆ ಬರುವುದರ ಮೂಲಕ (ಮತ್ತಾಯ 20:28) ಮತ್ತು ತನ್ನ ಶಿಷ್ಯರಿಗೆ ಒಬ್ಬರಿಗೊಬ್ಬರು ಸೇವೆ ಮಾಡಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸು (ಲೂಕ 22:26) ಮೂಲಕ ಆ ಪದಕ್ಕೆ ಘನತೆಯನ್ನು ಕೊಟ್ಟನು. ಆತನ ಶಿಷ್ಯರ ಗುರುತು ಆಗಿದ್ದು ಒಬ್ಬರು ಸಾವರ್ಥರಹಿತ ಜೀವಿನವನ್ನು ಕಟ್ಟುವುದೇ ಆಗಿದೆ (ಹೋಲಿಸಿ 1 ಕೊರಿಂಥ 16:15; ಇಬ್ರಿಯ 6:10; ಫಿಲೆಮೋನ 13; 2 ತಿಮೋಥೆಯ 1:18).

ಹೊಸ ಒಡಂಬಡಿಕೆಯ ಪ್ರಕಾರ ಸೇವೆಗಾಗಿ ಅನೇಕ ಮಾರ್ಗಗಳಿವೆ. "ಸೇವೆಯ ಕಾರ್ಯವು" ಸಂಪೂರ್ಣ ಸಭೆಯ ಒಂದು ನಿಯೋಗವಾಗಿದೆ (ಎಪೆಸ 4:12) ಪೌಲನು

"ಒಂದೇ ದೇವರಿಗಾಗಿ" ಅಲ್ಲಿ ಸೇವೆಗಾಗಿ ಅನೇಕ ವಿಧಗಳು ಇವೆ ಎಂದು ಹೇಳಿದನು (1 ಕೊರಿಂಥ 12:5). ಒಂದು ಮಹತ್ವದ ಸೇವೆ ಎಂದರೆ ಹಣದ ಕೊಡುಗೆಯೇ ಆಗಿದೆ. ಮೆಕೆದೋನ್ಯರು ಯೆರೂಸಲೇಮಿನ ಸಭೆಗೆ ಸಹಾಯ ಮಾಡಲು ಬಯಸುವಾಗ, ಅಲ್ಲಿ ಆ ಸೇವೆಯನ್ನು ಕಟ್ಟುತ್ತಿರುವದನ್ನು ಕಂಡರು. ಪೌಲನು ಆ ಸಂಗ್ರಹವನ್ನು ಯೆರೂಸಲೇಮಿಗೆ ಕೊಂಡೊಯ್ಯುವಾಗ ಆತನು ದೇವ ಜನರಿಗೆ ಸಹಾಯಮಾಡಬಯಸಿದನು (ರೋಮಾಪುರ 15:25). ಇನ್ನು ಮುಂದೆ ನಾವು ನಮಗಾಗಿ ಜೀವಿಸದೇ ಇರುವಂತ ನಾವು ತೋರಿಸುವಂತಹ ಅನೇಕ ಸೇವೆಯ ವಿಧಗಳು ಇವೆ (5:15). ಮೆಕೆದೋನ್ಯರಂತೆ ನಮ್ಮ ದೇವರಿಗೋಸ್ಕರ ಕೊಡುವವುಗಳು ನಾವು ಹೊಂದಿರುವವುಗಳನ್ನು ಪ್ರಾಯೋಗಿಕವಾಗಿ ತರಲು ಅಂಥ ಅನೇಕ ವುಗಳಲ್ಲಿ ಕೊಡುಗೆಯು ಒಂದು ಮಾರ್ಗವಾಗಿದೆ (8:5).

ನಾವು "ಸೇವೆಯನ್ನು" ಮಾಡುತ್ತಿರುವುದಾದರೆ ನಾವು ಕೊಡುಗೆಯಲ್ಲಿ ಹಂಚಿಕೊಳ್ಳುವಾಗ ಸಭೆಯ ಎಲ್ಲಾ ಸೇವಕರೂ ಇತರರಿಗೆ ಯಾವುದೋ ರೀತಿಯಿಂದ ಸೇವೆ ಮಾಡಬೇಕು ವಾಸ್ತವದ ದೃಷ್ಟಿಯನ್ನು ಕಳೆದುಕೊಳ್ಳಬಾರದೆಂಬ ಅರ್ಥವು ಇರುತ್ತದೆ. ಹೊಸ ದಾಖಲೆಯನ್ನು ನಿರ್ಮಿಸಲು ಅಥವಾ ನಮ್ಮನ್ನು ನಾವು ಸ್ಮಾರಕಗಳನ್ನಾಗಿಸುವ ನಿಟ್ಟಿನಲ್ಲಿ ನಾವು ಕೊಡುಗೆಯನ್ನು ಮಾಡಬಾರದು. ಇನ್ನೊಬ್ಬರಿಗಾಗಿ ತನ್ನನ್ನು ಕೊಡುವ ಕಾರ್ಯವನ್ನು ಮುಂದುವರೆಸಲು ಪ್ರತಿಯೊಂದು ಸೇವೆಯೂ ಆಶೆಯನ್ನು ಹೊಂದಿರುತ್ತದೆ. ನಮಗೆ ಅವಶ್ಯವಾದ ಸೇವೆಗಳು ನಮ್ಮನ್ನು ಕೊಡುವ ಅಂದರೆ ಪರಿಹಾರದ ವಿಶೇಷ ಕೊಡುಗೆ, ನಮ್ಮ ಮಕ್ಕಳಿಗೆ ಕಲಿಸಲು ಸಿಬ್ಬಂದಿಯನ್ನು ಒದಗಿಸಲು, ಮತ್ತು ಸೇವೆಯ ಕಾರ್ಯಗಳು ಇಂಥಹ ನಮ್ಮ ಒಳಪಡುವಿಕೆ ಜೊತೆಯಲ್ಲಿ ಪ್ರಾರಂಭವಾಗುತ್ತದೆ ಎಂದು ನಮ್ಮಲ್ಲಿ ಅನೇಕರು ಗುರುತಿಸಿದ್ದಾರೆ. ಕೇವಲ ಕಾರ್ಯಕ್ರಮಗಳು, ಸಮಿತಿಗಳನ್ನು, ಮತ್ತು ಅಯುವ್ಯಯದ ವರದಿ, ಹಂಚಿಕೊಳ್ಳುವದು ಹೀಗೆ ಮೆಕದನ್ಯರು ಮಾಡಿದಂತೆ ನಮಗೂ ಕೂಡ ಅನೇಕ ಸಾಧ್ಯತೆಗಳು ಇವೆ, ಆದರೆ ಹಂಚಿಕೊಳ್ಳುವದೂ ಕೂಡಾ ಉತ್ತೇಜನಕಾರಿ ಸೇವೆಯಾಗಿದೆ.

## ಪ್ರೀತಿಯ ಒಂದು ಪುರಾವೆ (8:7-15)

ಮೆಕೆದೋನ್ಯರು ತಮ್ಮನ್ನು ತಾವು ದೇವರಿಗೆ ಕೊಡುವುದನ್ನು ಪ್ರಯೋಗಕ್ಕೆ ತರುವುದರ ಮೂಲಕ (8:5) ತಮ್ಮ ಪರೀಕ್ಷೆಯಲ್ಲಿ ತೇರ್ಗಡೆಯಾದರು (ಹೋಲಿಸಿ 8:2). ಈಗ ಪೌಲನು ಕೊರಿಂಥಿಯನ್ನರು ತಮ್ಮ ಪ್ರೀತಿಯ "ಕುರುಹನ್ನು" ಕೊಡುವುದಕ್ಕಾಗಿ ಕೊರಿಂಥಿಯರೆಡೆಗೆ ತಿರುಗಿದನು (8:7, 8.) NIVಯಲ್ಲಿ ಓದುವಂತೆ "ಇತರರ ಶ್ರದ್ಧೆಯ ಜೊತೆ ನಿಮ್ಮ ಪ್ರೀತಿಯ ಪ್ರಾಮಾಣಿಕತೆಯನ್ನು ಹೋಲಿಸುವುದರ ಮೂಲಕ ಪರೀಕ್ಷಿಸುವವನಾಗಿದ್ದೇನೆ" ಎಂದಿದೆ. ಇದು ಕೇವಲ ಆಳವಾದ ಧ್ಯಾನ ಮತ್ತು ಆದರಗಳನ್ನು ಪ್ರತಿಪಾದಿಸುವುದಲ್ಲ. ಪ್ರೀತಿ ಗೋಸ್ಕರವಾದದ್ದು ಯಾವಾಗಲೂ ಇತರಿಗೋಸ್ಕರ ನಮ್ಮ ತ್ಯಾಗದ ಒಪ್ಪುವಿಕೆಯನ್ನು ಪರೀಕ್ಷಿಸುವುದಾಗಿದೆ. ಇದು ಕಪಟತ್ವದಿಂದಲೂ ತುಂಬಿರಬಹುದು (ರೋಮಾಪುರ 12:9). ಪೌಲನು ಕೊರಿಂಥದವರಿಗೆ ತನ್ನ ಪ್ರೀತಿಯನ್ನು ತನ್ನ ಅನೇ ಭೇಟಿಯಲ್ಲಿ, ಪತ್ರದಲ್ಲಿ ಮತ್ತು ನಿದ್ರೆರಹಿತ ರಾತ್ರಿಗಳಲ್ಲೂ ಕೂಡಾ ಈಗಾಗಲೇ ತೋರಿದ್ದನು (ಹೋಲಿಸಿ 2:4; 6:6). ಕ್ರಿಸ್ತನು ತನ್ನ ಪ್ರೀತಿಯನ್ನು ತನ್ನ ಸಂಪತ್ತನ್ನು "ನಮಗೋಸ್ಕರ" ಕೊಡುವುದರ ಮೂಲಕ ಹಾಗೂ ನಮ್ಮನ್ನು ಶ್ರಿಮಂತವಾಗಿಸುವುದರ ನಿಟ್ಟಿನಲ್ಲಿ ತನ್ನ ಪ್ರೀತಿಯನ್ನು ಪ್ರಾಯೋಗಿಕವಾಗಿ ತಿಳಿಸಿದ್ದಾನೆ (8:9). ನೈಜ ಪ್ರೀತಿಯು ಸದಾಕಾಲ ಯಾವಾಗಲೂ ಇತರರಿಗೆ ಸೇವೆ ಮಾಡುವ ನಿಜ ಕಾರ್ಯಗಳಲ್ಲಿ ಕಂಡುಬರುವುದಾಗಿದೆ. ಅಂತೆಯೇ ಪೌಲನು, "ಆದುದರಿಂದ ನಿಮ್ಮ ಪ್ರೀತಿಯು ಯಥಾರ್ಥವಾದದ್ದೆಂಬದನ್ನೂ ನಮ್ಮನ್ನು ನಾವು ಹೊಗಳಿದ್ದು ನ್ಯಾಯವೆಂಬುದನ್ನೂ ಇವರಿಗೂ ಸಭೆಗಳಿಗೂ ತೋರಿಸಿಕೊಡಿರಿ" ಎಂದು ಹೇಳಿದ್ದಾನೆ (8:24). ಕೊರಿಂಥದವರು ಮೆಕೆದೋನ್ಯದಲ್ಲಿ ಒಂದು ಸಭೆಯನ್ನು ಹೊಂದಿದಂತೆ ಉತ್ತಮ ಮಾದರಿಯ ಸೇವೆಯನ್ನು

ಸಭೆಯು ಹೊಂದುವದು ಒಳ್ಳೆಯದೇ, ಆದರೆ ನಮ್ಮ ಪ್ರೀತಿಯು ಕಪಟವಾದದ್ದುಲ್ಲ ಎಂಬುದನ್ನು ಪ್ರಾಯೋಗಿಕವಾದುದ್ದನ್ನು ಕೊಡುವುದರ ಮೂಲಕ ಮಾದರಿಯಾದುವುದಕ್ಕೆ ಸಮಯವು ಉಂಟು.

ಕೊರಿಂಥದವರೆಗೆ ಪೌಲನು ಹಾಕಿದ ಸವಾಲಿನ ಬಗೆಗೆ ಓದಿದ ಮೇಲೆ, ನಾವು ಅವುಗಳನ್ನು ಗುರುತಿಸಬಹುದಾಗಿದೆ. ಪ್ರೀತಿಯ ಸೇವೆಯಲ್ಲಿ ನಮ್ಮನ್ನು ಇತರರಿಗಾಗಿ ಬರಿದು ಮಾಡಿಕೊಳ್ಳುವ ಮೂಲಕ "ಪರೀಕ್ಷೆಯಲ್ಲಿ ಪಾಸಾದ" ಮೆಕೆದೋನ್ಯರಂತೆ ನಮ್ಮಲ್ಲಿ ಅನೇಕರು ಇಲ್ಲ. ಅವರ ಅನೇಕ ಚರ್ಚೆಯಲ್ಲಿ, ಕೊರಿಂಥದವರು ಸಭೆಯ ಉದ್ದೇಶವನ್ನು ನೆನಪಿನಲ್ಲಿ ಇಟ್ಟಿಕೊಂಡಿದ್ದಾರೆಂಬುದನ್ನು ಸಾಧಿಸಿ ತೋರಿಸುವ ಸವಾಲಿಗೆ ಒಳಗಾಗುತ್ತಾ ಇದ್ದರು. ಶತಮಾನದುದ್ದಕ್ಕೂ, ಇತರರಿಗೋಸ್ಕರ "ಬಡವರಾಗುವ" ಯೇಸುವಿನ ಉದಾಹರಣೆಯನ್ನು ಪಾಲಿಸುವ ನಿಯೋಗವನ್ನು ನೆನಪಿನಲ್ಲಿಟ್ಟುಕೊಳ್ಳುವಂತ ಶ್ರೇಷ್ಟ ಚರ್ಚುಗಳು ಇರುವವು ಆಗಿವೆ. ಚರ್ಚಗಳು ವ್ಯಕ್ತಿಗಳಂತೆ "ತಮಗೋಸ್ಕರ ಹೆಸರನ್ನು ಸಂಪಾದಿಸುವ" ಪ್ರೇರಣೆಗೆ ಒಳಗಾಗುತ್ತವೆ ಮತ್ತು ಬಲವನ್ನು ಮತ್ತು ಪ್ರಭಾವವನ್ನು ಸಾಧಿಸುವವುಗಳು ಆಗಿವೆ. ಕೆಲವು ಬರಿ ಚರ್ಚುಗಳು ಮನರಂಜಿಸಲು ಮತ್ತು ತನ್ನ ಸ್ವಂತ ಜನರಿಗೆ ಅನುಕೂಲವಾಗುವ ಸ್ಥಳವನ್ನು ಒದಗಿಸಲು ಅಸ್ತಿತ್ವವಾಗಿರಲು ಸಾಮಾಜಿಕ ಕ್ಲಬನ್ನು ಹೋಲುವಂತೆ ಇರುತ್ತವೆ. ಪರೀಕ್ಷೆಯನ್ನು ಎದುರಿಸಿ ವಿಫಲವಾದ ಕೊರಿಂಥದವರಂತೆ ಅನೇಕ ಚರ್ಚಗಳೆಂದು ಇವೆ. ನಾವು ಪರೀಕ್ಷೆಯಲ್ಲಿ ಪಾಸಾಗಿ ಯೇಸು ನಮಗೋಸ್ಕರವಾಗಿ "ಬಡವನಾಗಿವುದನ್ನು" ಪ್ರಾಯೋಜಿಸಿದ ಹಾಗೆ ಸಭೆಯ ಜೀವನದಲ್ಲಿ ಇತರರಿಗೋಸ್ಕರ ಪ್ರೀತಿಯ ಸೇವೆಯನ್ನು ಪುನರಾವರ್ತಿಸುವುದಾಗಿದೆ.

## ಟೀಕೆಯನ್ನು ಅಲಕ್ಷಿಸು (8:17-24)

ಕೊಡುಗೆಯನ್ನು ಕೇಳಿ ಬರುವವರು ಸಂಶಯಾತ್ಮಕ ಅಡಿಯಲ್ಲಿ ಇದ್ದು ಸಹಜವಾಗಿ ಇತರರಿಗೋಸ್ಕರ ತ್ಯಾಗವಾಗಿ ಕೊಡುವುದರಲ್ಲಿ ಸುಲಿಗೆ ಮಾಡುವವರಾಗಿದ್ದು ತಮ್ಮನ್ನು ಸಮೃದ್ಧವಾಗಿಸಿಕೊಳ್ಳುವವರಾಗಿದ್ದಾರೆ ಧಾರ್ಮಿಕ ಸಂಸ್ಥೆಗಳು ಹಗರಣಗಳಲ್ಲಿ ಒಳಗೊಂಡಿರುವ ಮೂಲಕ ಹಲವು ಬಾರಿ ಸಂಶಯಗಳನ್ನು ಬಲಪಡಿಸುವವುಗಳು ಆಗಿವೆ. ಆಗ ಆದ್ಯೆಯದ ಪ್ರಮುಖ ಭಾಗವು ವಿಧಿಸಿದ ಶುಲ್ಕದಲ್ಲಿ ಬಳಸಲಾಗುತ್ತದೆ. ಅನೇಕ ಉದಾಹರಣೆಗಳಲ್ಲಿ, ಈ ಸಂಸ್ಥೆಗಳು ಶುಲ್ಕ ವಿಧಿಸುವುದನ್ನು ಬಿಟ್ಟರೆ ಬೇರೆಯಾವ ಉದ್ದೇಶಕ್ಕೂ ಅಸ್ತಿತ್ವದಲ್ಲಿ ಇಲ್ಲ ಎಂಬಂತೆ ಕಂಡುಬರುತ್ತದೆ. ಸೇವೆಯ ಕಾರ್ಯಕ್ಕಿಂತಲೂ ಹೆಚ್ಚಾಗಿ ಶುಲ್ಕ ವಿಧಿಸುವುದರಲ್ಲಿಯೇ ಇರುವವುಗಳಾಗಿವೆ.

ನ್ಯಾಯಬದ್ಧವಾದ ಸೇವೆಯು ಸಂಶಯಾತ್ಮಕ ತಿರುಗಾಡುವುದನ್ನು ನಿರ್ಲಕ್ಷಿಸಲಾರದು. ಈ "ಉದಾರವಾದ ಕಾಣಿಕೆಯ" (8:20) ಬಗೆಗೆ ಹೇಳಬಹುದಾದ ಸಂಶಯದ ಬಗೆಗೆ ಪೌಲನು ಸಂಪೂರ್ಣವಾಗಿ ಎಚ್ಚರದಿಂದಿದ್ದನು. ಪೌಲನ ಸೇವೆಯು ನ್ಯಾಯಬದ್ಧವಾಗಿತ್ತು ಎಂಬುದರ ಬಗೆಗೆ ಖಚಿತವಾಗಿದೆ ಎಂದು ಈಗಾಗಲೇ ಆತನ ಪ್ರಾಮಾಣಿಕತೆಯ ಬಗೆಗೆ ಪ್ರಶ್ನಿಸಿದ ಒಬ್ಬ ಸಾಮಾನ್ಯ ವೀಕ್ಷಕನು ಏನೂ ಹೇಳದಿರಬಾರದೇ? ಆತನು ಮಹತ್ವವಾದಂತ ತನ್ನ ಹಣ ನಿರ್ವಹಿಸುವವನಾಗಿರಲಿಲ್ಲ. ಕೊರಿಂಥದವರಿಗೆ ಸಂಕಷ್ಟಮಯ ಸಂದರ್ಭದಲ್ಲಿ ತನ್ನ ಬಾಧ್ಯತೆಯನ್ನು ತೋರ್ಪಡಿಸಲು ಆತನು ಏಕಾಂಗಿಯಾಗಿ ಹಣ ನಿರ್ವಹಣೆಯ ಪ್ರಾಮಾಣಿಕೆಯಲ್ಲಿ ಆತನು ಯಾವ ಅವಕಾಶವನ್ನು ತೆಗೆದುಕೊಳ್ಳುವಂತೆ ಕಾಣಿಸಲಿಲ್ಲ. ಆತನು ಏಕಾಂಗಿಯಾಗಿ ಹಣ ನಿರ್ವಹಣೆಯ ಪ್ರಾಮಾಣಿಕತೆಯಲ್ಲಿ ಆತನು ಯಾವ ಅವಕಾಶವನ್ನು ತೆಗೆದುಕೊಳ್ಳುವಂತೆ ಕಾಣಿಸಲಿಲ್ಲ. ಆತನು ಏಕಾಂಗಿಯಾಗಿ ಹಣ ನಿರ್ವಹಿಸುವವನಾಗಿರಲಿಲ್ಲ. ಕೊರಿಂಥದವರಿಗೆ ಸಂಕಷ್ಟಮಯ ಸಂದರ್ಭದಲ್ಲಿ ತನ್ನ ಬಾಧ್ಯತೆಯನ್ನು ತೋರ್ಪಡಿಸಲು ಆತನು ತೀತನನ್ನು ಕಳುಹಿಸಿದನು (7:5-16), ತೀತನು ತನ್ನ ಬೋಧಿಸುವಿಕೆಗಾಗಿ

“ಸುವಾರ್ತಾ ಸೇವೆಯಲ್ಲಿ ಎಲ್ಲಾ ಸಭೆಗಳೊಳಗೆ ಕೀರ್ತಿ ಪಡಕೊಂಡವನಾಗಿದ್ದ ಸಹೋದರ” ಎಂದು ಗುರುತಿಸಲ್ಪಡುವಿಕೆಯನ್ನು ಜೊತೆಯಾಗಿ ಪಡೆದಿದ್ದನು (8:18). ವಾಸ್ತವವಾಗಿ ಆತನ ಮೇಲೆ ನಂಬಿಕೆಯನ್ನು ಇರಿಸಿದ ಸಭೆಗಳಿಂದ ಆತನು ನಿರ್ಧಿಷ್ಟವಾಗಿ ನಿಯೋಜಿಸಲ್ಪಟ್ಟಿದ್ದನು ಎಂದು ಸಹೋದರನ ಯೋಗ್ಯತೆಯು ಸೂಚಿಸುವುದಾಗಿದೆ. ಮೂರನೆಯ ಜೊತೆಗಾರನು ಸರಳವಾಗಿ “ನಮ್ಮ ಸಹೋದರ” ಎಂದು ಗುರುತಿಸಲ್ಪಟ್ಟಿದ್ದಾನೆ (8:22). ಆತನೂ ಸಹ “ಪರೀಕ್ಷಿಸಲ್ಪಡುತ್ತಿರುವ ಮತ್ತು ದೃಢಸಂಕಲ್ಪವನ್ನು ಕಂಡವನೂ” ಆಗಿದ್ದು. ಈ ಎಲ್ಲಾ ಜನರು “ಸಭೆಗಳಿಂದ ಕಳುಹಿಸಲ್ಪಟ್ಟವರೂ” (8:23), ಆಗಿದ್ದು ಅವರ ಪ್ರಾಮಾಣಿಕತೆಯು ಎಂದಿಗೂ ಪ್ರಶ್ನಿಸಲ್ಪಟ್ಟಿರಲಿಲ್ಲ.

8:20, 21ರಲ್ಲಿ, ಸಭೆಯ ಹಣದ ನಿರ್ವಹಣೆಯಲ್ಲಿನ ಹಿಂಸೆಯನ್ನು ಯಾಕೆ ಸವಿಸ್ತಾರಗೊಳಿಸಿದನು ಎಂಬುದನ್ನು ಪೌಲನು ಹೇಳುತ್ತಾನೆ. NIVಯಲ್ಲಿ ಆತನ ಮಾತನ್ನು “ನಾವು ಪಾರುಪತ್ಯಮಾಡುವ ಈ ದ್ರವ್ಯ ಸಂಚಯದ ವಿಷಯದಲ್ಲಿ ಒಬ್ಬರೂ ನಮ್ಮ ಮೇಲೆ ತರುವಂತೆ ವರ್ತಿಸುವದಕ್ಕೆ ಇಷ್ಟೇ ಸಾಲದು” (8:20). ಎಂದು ಪೌಲನು ಅರಿತಿದ್ದನು ಆತನು ತನ್ನ ಪ್ರಾಮಾಣಿಕತೆಯ ಬಗೆಗೆ ಸಂಶಯಿಲ್ಲದನ್ನು ಆತನು ಬಿಟ್ಟುಬಿಟ್ಟಿದ್ದನು (ಹೋಲಿಸಿ 8:21) ಇದಕ್ಕೆ ಸಾಮಾನವಾದ ಮಾತಿನಲ್ಲಿ “ನಿಂದೆಗೆ ಅವಕಾಶಕೊಡದ ಎಲ್ಲಾ ಸಂಗತಿಗಳಲ್ಲಿ ...” ಎಂದು ಆತನು 6:3ರಲ್ಲಿ ಹೇಳುತ್ತಾನೆ. 8:19, 20ರಲ್ಲಿ, ಹಣದ ನಿರ್ವಹಣೆಯಲ್ಲಿ ಆತನ ಸೇವೆಯು ಒಳಗೊಂಡಿರುವದನ್ನು ಪೌಲನು ಅರಿತಿದ್ದನು. ವಾಸ್ತವವಾಗಿ, NIVಯಿಂದ “ಆಡಳಿತಗಾರ” ಎಂದು ಅನುವಾದಂತಹದ್ದು ಕ್ರಿಯಾಪದವಾದ *diakoneo* (“ಸೇವೆ ಮಾಡುವದು”) ಎರಡು ವಚನಗಳಲ್ಲಿ ಬಳಸಲ್ಪಟ್ಟಿದೆ. ಸಂಪೂರ್ಣ ಸಭೆಯು ಸೇವೆಯಲ್ಲಿ ಪಾಲು ತೆಗೆದುಕೊಳ್ಳಬಹುದಾಗಿದೆ, ಆದರೆ ಕೆಲವರು ಹಣವನ್ನು ಸಂಗ್ರಹಿಸುವುದರಲ್ಲಿ ಮತ್ತು ಹಂಚುವ ಸೇವೆಯಲ್ಲಿ ತೊಡಿಗಿದ್ದರು.

ದೇವರ ದೃಷ್ಟಿಯಲ್ಲಷ್ಟೇ ಅಲ್ಲ, “ಆದರೆ ಮಾನವರ ದೃಷ್ಟಿಯಲ್ಲೂ ಯಾವದು ಮಾನ್ಯವೋ ಅದನ್ನೇ ನಮ್ಮ ಗುರಿಯಾಗಿಸಿಕೊಳ್ಳಬೇಕು” ಎಂಬ ಪೌಲನ ಹೇಳಿಕೆಯನ್ನು ಚರ್ಚಗಳಿಗೆ ಅರಿತುಕೊಳ್ಳುವದು ಅವಶ್ಯವಿದೆ (ಹೋಲಿಸಿ ಜ್ಞಾನೋಕ್ತಿ 3:4). ಹಣದ ನಿರ್ವಹಣೆಯನ್ನು ಮಾಡುವವರ ಮತ್ತು ಹಂಚುವವರ ಬಗೆಗಿನ ಸಂಶಯವನ್ನು ಪರಿಹರಿಸುವ ಜವಾಬ್ದಾರಿಯನ್ನು ಉದಾರವಾದ ಕೊಡುಗೆಯ ಮೂಲಕ “ತಾವಾಗಿ ಕೊಡುವುದನ್ನು” ಇತರರಿಗೆ ನಾವು ಒತ್ತಾಯಿಸುವವರಾಗಿದ್ದೇವೆ. ಅಯೋಗ್ಯವಾದ ರೀತಿಯಲ್ಲಿ ಹಣದ ನಿರ್ವಹಣೆಯನ್ನು ಮಾಡುವದು ಸಭೆಯ ಪ್ರತಿಷ್ಟೆಗೆ ಟೀಕೆಯನ್ನು ಸೃಷ್ಟಿಸುವುದಾಗಿದ್ದು ಉದಾರವಾಗಿ ಕೊಡುವ ಉತ್ಸಾಹವನ್ನು ಭಂಗಮಾಡುವದು ಆಗಿದೆ. ಇತರರ ಹಣವನ್ನು ಎಚ್ಚರಿಕೆಯಿಲ್ಲದ ರೀತಿ ಯಲ್ಲಿ ವ್ಯವಹಾರಮಾಡುವುದರಲ್ಲಿನ ಸಭೆಯ ದಾಖಲೆಯೂ ಸಹ ಕೊಡುವ ಸೇವೆಯಲ್ಲಿ ಒಳಗೊಳ್ಳುವ ಇಚ್ಛೆಯನ್ನು ನಾಶಮಾಡಬಹುದಾಗಿದೆ. ಆದ್ದರಿಂದ ಎಲ್ಲಿ ದಾಖಲೆಗಳನ್ನು ಇಡುವುದರಲ್ಲಿ ಸಮರ್ಥರಾಗಿರುತ್ತರೋ, ಸಭೆಯ ಅಂಕಿಅಂಶದ ಕಾರ್ಯದ ರೀತಿ ಯಲ್ಲಿ ಸುಧಾರಿಸಿರುತ್ತಾರೋ, ಮತ್ತು ಎಷ್ಟು ಹಣ ವ್ಯಯವಾಗಿದೆ ಎಂದು ಇತರರಿಗೆ ಮಾಹಿತಿಕೊಡುತ್ತಾರೋ ಅಲ್ಲಿ ನ್ಯಾಯಬದ್ಧವಾದ ಸೇವೆಯು ಇರುತ್ತದೆ. ಸಭೆಯ ಕಾರ್ಯಗಳನ್ನು ಆತ್ಮೀಕ ಮತ್ತು ಐಹಿಕ ಬದಿಗಳಲ್ಲಿ ನಾವು ವಿಭಾಗಿಸುವಾಗ ನಮ್ಮ ನಂಬಿಕೆಯ ಮಹತ್ವವಾದ ಸಂಗತಿಗಳನ್ನು ಉಪೇಕ್ಷಿಸುವವರಾಗಿರುತ್ತೇವೆ. ದ್ರವ್ಯದ ನಿರ್ವಹಣೆಯಲ್ಲಿ ಪೌಲನು ತನ್ನನ್ನು ತಾನು “ಸೇವಕನ” ರೀತಿಯಲ್ಲಿ ನೋಡಿದನು. ನ್ಯಾಯಬದ್ಧವಾದ ಸೇವೆಯು ಅಜಾಗರೂಕತೆಯನ್ನು ಅಲಕ್ಷಿಸುವುದಾಗಿದ್ದು ದೂರದೃಷ್ಟಿ ಮತ್ತು ನಿಯತ್ತಿನ ಬಗೆಗೆ ಸಂಶಯದತ್ತ ನಡೆಸುವುದಾಗಿದೆ.

## ಈ ಸಾರ್ವಜನಿಕ ಸೇವೆ (9:1-12)

ಹುಮ್ಮನಸ್ಸಿನಿಂದ ಕೂಡಿದ ಸೇವೆಯ ಪ್ರಾರಂಭವು, ವಿಫಲತೆಯ ನಂತರದ ನಮ್ಮನ್ನು ದೃತಿಗೆಡಿಸಬಹುದಾಗಿದೆ. ಸೇವೆಯು ಯೋಜಿಸಿದ್ದಕ್ಕಿಂತಲೂ ಹೆಚ್ಚು ಅವಸರದಲ್ಲಿ ಕಾಣುವಂಥ ಸಂದರ್ಭಗಳಿಂದ ಮತ್ತು ಸಂಗತಿಗಳಿಂದ ಇಂಥ ವಿಫಲತೆಗಳಿಗೆ ಕಾರಣವಾಗಬಹದು. ಸಂಗ್ರಹಣೆಯಲ್ಲಿ ಕೊರಿಂಥಯನ್ನರ ಪಾತ್ರವು ಉದಾಹರಣ ರೀತಿಯಲ್ಲಿ ನ್ಯಾಯಬದ್ಧವಾದ ಸೇವೆಯು ಕೆಲ ಕ್ಷಣಗಳವರೆಗೆ ಅಲಕ್ಷಿಸಲ್ಪಡುತ್ತದೆ. ಎರಡು ದೃಷ್ಟಾಂತಗಳಲ್ಲಿ, ಎರಡು ವರ್ಷಗಳ ಕಾಯುವಿಕೆಯ ನಂತರ ವಿಶೇಷ ಸೇವೆಯು ಅಪೂರ್ಣವಾಗಿಯೇ ಉಳಿಯಿತು ಎಂದು ಪೌಲನು ತನ್ನ ಓದುಗರಿಗೆ ನೆನಪಿಸುವವನಾಗಿದ್ದಾನೆ (8:10; 9:2). ಶ್ರೇಷ್ಟ ಯೋಜನೆಗಳನ್ನು ಹೊಂದಲು ಅದು ಸಾಲದು ಎಂದು ನೆನಪಿಸುವವನಾಗಿದ್ದಾನೆ; ಶ್ರೇಷ್ಟ ನಿಯೋಗವು ಮಾಡಿದಂತಹ ಯೋಜನೆಯನ್ನು ನಿರ್ವಹಿಸುವುದಾಗಿದೆ. "ಈ ಕಾರ್ಯವನ್ನು ಪ್ರಾರಂಭಿಸುವುದಕ್ಕೆ ಹೇಗೆ ನಿಮ್ಮಲ್ಲಿ ಸಿದ್ಧ ಮನಸ್ಸು ಇತ್ತೋ ಹಾಗೆಯೇ ನಿಮ್ಮ ನಿಮ್ಮ ಶಕ್ತ್ಯಾನುಸಾರಾಗಿ ನೆರವೇರಿಸಿ" ಎಂದು ಆತನು ಹೇಳುತ್ತಾನೆ (8:11). ಅನೇಕ ಚರ್ಚುಗಳು ಧೈರ್ಯದಾಯಕ ಯೋಜನೆಗಳನ್ನು ಮಾಡುತ್ತವೆ, ಆದರೆ ಕೆಲವು ಪೂರ್ಣತೆಯಲ್ಲಿ ಅಂತ್ಯವಾಗುವುದಿಲ್ಲ.

ಹಳೆಯದಾದ ಯೋಜನೆಗಳನ್ನು ಕಾಪಾಡುವ ಹೊಣೆಯನ್ನು ಹೊರುವುದಕ್ಕಿಂತ ಹೊಸದವುಗಳ ಕನಸ್ಸನ್ನು ಕಾಣುವದು ಸರಳವಾಗಿರುವುದಾಗಿದೆ. ಹೊಸದೊಂದನ್ನು ನಾವು ವಿವರಿಸುವಾಗ, ಯಾವದು ಸಾಧ್ಯ ಎಂದು ಸೊಗಾಸಾದ ರೀತಿಯಲ್ಲಿ ವಿವರಿಸುವದನ್ನು ನಾವು ಕಂಡುಕೊಳ್ಳುವೆವು. ಒಂದು ಹಳೆಯ ಸೇವೆಯ ಕಾರ್ಯಯೋಜನೆಗಳಿಗೆ ಒಳಗಾದಾಗ, ನಾವು ಪೌಲನೊಡನೆ ಹೀಗೆ ಹೇಳಬಹುದು "ದೇವಜನರಿಗೋಸ್ಕರ ನಡೆಯುವ ಸಹಾಯಕಾರ್ಯವನ್ನು ಕುರಿತು ನಿಮಗೆ ಬರೆಯುವುದಕ್ಕೆ ಅವಶ್ಯವಿಲ್ಲ" (9:1). ಆ ವಚನವು "... ನಿಮಗೆ *ಬರೆಯುತ್ತಾ ಇರುವುದು* ನನಗೆ ಅವಶ್ಯವಿಲ್ಲ" ಎಯ ಅನುವಾದವಗಿದೆ. ಸೇವೆಯು (*diakonia,* 9:1) ಮುಂಚೆಯೇ ವಿವರಿಸಲ್ಪಟ್ಟಿದೆ; ಅದರಲ್ಲಿ ಹೊಸದೇನೂ ಇಲ್ಲ.

ತನ್ನ ವಿಷಯವನ್ನು ಕಳೆದುಕೊಂಡ ಸೇವೆಯನ್ನು ನಾವು ಹೇಗೆ ವಿವರಿಸಬಹುದು? ಪೌಲನ ಕೊರಿಂಥದವರಿಗೆ ಬರೆದ ಹಾಗೆ, ಅವರು ಆತನನ್ನು ಇತರ ಸಭೆಗಳ ಮುಂದೆ ಅವಮಾನಿಸುವರು ಎಂಬ ಭಯವು ಆತನಲ್ಲಿ ಇತ್ತು ಎಂದು ನಾನು ಊಹಿಸುತ್ತೇನೆ. ವರ್ಷದ ನಂತರ, ಅಲ್ಲಿ ವಿಶೇಷ ಅತಯವಸರವು ಈಗ ಆ ಯೋಜನೆಯಲ್ಲಿದೆ (9:4). ಆ ಸಂಗ್ರಹವು "ಸೇವೆ" ಅಥವಾ "ಸಹಾಯ" ಎಂದು ಆತನು ಅವರಿಗೆ ನೆಪಿಸುವುದರ ಮೂಲಕ ಅವರನ್ನು ಪ್ರೋತ್ಸಾಹಿಸಲು ಆರಂಭಿಸಿದನು (9:1). ನಂತರ ಆತನು ಈ ಸೇವಗಾಗಿನ ಅವರ ಹೊಣೆಗಳು ಮೆಕೆದೋನ್ಯರ ಜೊತೆಯಲ್ಲಿ ಈಗಾಗಲೇ "ಅಲುಗಾಡಿಸಲ್ಪಟ್ಟವರು" ಎಂದು ಕೊರಿಂಥಿಯನ್ನರಿಗೆ ಹೇಳಲು ಮುಂದುವರೆದನು. ಮೆಕೆದೋನ್ಯ ಸಭೆಯು, ತ್ಯಾಗದ ಸೇವೆಗೆ ದೊಡ್ಡ ಉದಾಹರಣೆಯಾಗಿದ್ದು (8:1-7), ಮೂಲತವಾಗಿ ತಮಗೆ ತಾವೇ ಕೊರಿಂಥದವರಿಗೆ "ಅಲುಗಾಡಿಸಲ್ಪಡುವದರ" ಮೂಲಕ ಉದಾಹರಣೆಯಾಗಿದ್ದು (9:1-5)! ಸಭೆಗಳು ಒಂದರಿಂದ ಒಂದು ಕಲಿಯುತ್ತವೆ. ಸಭೆಯ ಜೀವಿತದ ವಿಭಿನ್ನ ಸಮಯಗಳಲ್ಲಿ ಉತ್ತಮ ಉದಾಹರಣೆ ಆಗಿರುವ ಮತ್ತು ಉತ್ತಮ ಉದಾಹರಣೆಯನ್ನು ಪಾಲಿಸುವುದರ ಮಧ್ಯದ ಆಯ್ಕೆಯು ಆಗಿರುತ್ತದೆ. ಸೇವೆಯು ಜೀವನದ ಮಾರ್ಗವಾಗಿರಬೇಕು ಎಂದು ಯೇಸು ಉದಾಹರಣೆಯ ಮೂಲಕ ಒದಗಿಸಿದ ರೀತಿಯಲ್ಲಿ, ನಾವು ಪ್ರತಿಯೊಬ್ಬರಿಂದ ಕಲಿಯಬೇಕು.

ಸೇವೆಗಳು ಉತ್ತಮ ಸ್ಮರಣೆಗಳಿಂದ ವರ್ದಿಸುವವುಗಳಾಗಿವೆ. ನಾವು ಒಂದು ಸಾರಿ ಹೊಂದಿದ ಉತ್ತಮ ಪ್ರಭಾವದ ಸ್ಮರಣೆಯು ನಮಗೆ ನೆನಪಿಸುವುದಾಗಿದೆ. ನಮ್ಮ ಉದಾಹರಣೆಗಳು ಇತರನ್ನು ಪ್ರೋತ್ಸಾಹಿಸುವವುಗಳು ಆಗಿರುವುದನ್ನು ನಾವು ನೆನಪು ಮಾಡಿಕೊಳ್ಳುತ್ತೇವೆ. ಆದ್ದರಿಂದ ಒಂದು ಸಾರಿ ನಮಗೆ ನಾಯಕತ್ವವನ್ನು ಒದಗಿಸಿದ ಸೇವೆಯನ್ನು ಬಿಟ್ಟುಬಿಡುವದು ನಮ್ಮನ್ನು ದೃತಿಗೆಡಿಸುವುದಾಗಿದೆ.

ಈಗ ಮೆಕದೋನ್ಯರು ಕೊರಿಂಥದವರಿಗೆ ಮಾದರಿಯಾಗಿದ್ದಾರೆ. 8:2ರಲ್ಲಿ, ಪೌಲನು ಅವರ ಅಸಾಧಾರಣವಾದ ಉದಾರತೆಯನ್ನು ವಿವರಿಸಿದ್ದಾನೆ. 9:11, 13ರಲ್ಲಿ ಇದು "ಉದಾರತೆ" ಎಂದು ಭಾಷಾಂತರವಾದದಲ್ಲಿ ಅದೇ ಪದವು, "ದೃಢ ಸಂಕಲ್ಪದ ಉದ್ದೇಶ" ಎಂಬರ್ಥವನ್ನು ಹೊಂದಿಕೊಂಡು ಕೊರಿಂಥಿಯನ್ನರಿಗೆ ಅನ್ವಯವಾಗುವ ರೀತಿಯಲ್ಲಿ ನಿಯುಕ್ತವಾಗಿದೆ. ಇದನ್ನು ಪೌಲನು, "ಮೆಕೆದೋನ್ಯರು ತೋರಿಸಿದ ಕಾರ್ಯದಂತೆ ನೀವೂ ಕೂಡ ಏಕಮನಸ್ಸಿನ ತೋರಿಸುವ ಸಮಯ ಇದಾಗಿದೆ" ಹೀಗೆ ಹೇಳಿರಬಹುದು. ಸೇವೆಯ ಕಾರ್ಯದಲ್ಲಿ ಅವರ ಪಾಲ್ಗೊಳ್ಳುವಿಕೆಯು ಎಲ್ಲಡೆಲ್ಲಿರುವ ದೃಢವಾಗಿ ಸಂಸ್ಥಾಪಿತವಾದ ಅವರ ಅಧ್ಯತೆಗಳಿಗೆ ಸೂಚನೆಗಳನ್ನು ಕಳಿಸುವುದಾಗಿತ್ತು. ಉತ್ಸಾಹದ ಹೃದಯವು (9:7) ಸಾಗುವುದನ್ನು ಒತ್ತಿ ಹೇಳುವಿಕೆಯು ಯೇಸುವಿನ ಸಾಮ್ಯದಲ್ಲಿನ ತನ್ನ ಬದುಕನೆಲ್ಲಾ ಮಾರಿ ಹೊಲವನ್ನು ಕೊಡುಕಂಡ ಮನುಷ್ಯನ ಸಂತೋಷವನ್ನು ನಮಗೆ ನೆನಪಿಗೆ ತರುವುದಾಗಿದೆ (ಮತ್ತಾಯ 13:44). ನಮ್ಮ ಆಧ್ಯತೆಗಳು ನಿಯತವಾಗಿಲ್ಲದಿದ್ದಾಗ ನಾವು "ಕ್ವಚಿತ್ತಾಗಿ ಕೊಡುತ್ತೇವೆ" (9:6). ನಾವು ಒಮ್ಮನಿಸ್ಸನವರಾದಾಗ ನಾವು ಹುಮ್ಮನಸ್ಸಿನಿಂದ ಕೊಡುವವ ರಾಗಿರುತ್ತಾರೆ (9:7).

ಉದಾರವಾದ ಪ್ರತಿಕ್ರಿಯೆಯು ನಮ್ಮ ತ್ಯಾಗದ ಒಳ್ಳೆಯ ಉದ್ದೇಶಕ್ಕಾಗಿಯೇ ಎಂದು ಗುರಿತುಸುವಷ್ಟು ಸ್ಪಷ್ಟವಾಗಿರುವುದನ್ನು ಯಾವದು ಆಹ್ವಾನಿಸಲಾರದು. ಸಂಗ್ರಹಣೆಯನ್ನು ಸೂಚುಸುವಲ್ಲಿ ಪೌಲನ ಪಾರಿಭಾಷಿಕವು ಇದರ ನಿಜ ಉದ್ದೇಶಗಳ ಬಗೆಗೆ ಯಾವುದೇ ಸಂಶಯವನ್ನು ಬಿಡಲಾರದು. 9:12ರಲ್ಲಿನ "ಈ ಕಾರ್ಯದ ಸೇವೆಯ" ವಿವರಣೆಯು ಸಂಗ್ರಹವನ್ನು ವರ್ಣಿಸಲು ಬಳಸಲ್ಪಟ್ಟಿದೆ. (*Diakonia tes leitourgias*) ಎರಡು ಪದಗಳು ಪ್ರಾಯೋಗಿಕವಾಗಿ ಸಮಾನಾರ್ಥವನ್ನು ಕೊಡುವವುಗಳು ಆಗಿವೆ ಮತ್ತು ಸಂಗ್ರಹಕ್ಕೆ ಪೌಲನು ಹೇಗೆ ಮನ್ನಣೆಯನ್ನು ಕೊಡುತ್ತಿದ್ದನು, ಮತ್ತು ಅವುಗಳನ್ನು ನೆನಪಿಸುವವುಗಳು ಆಗಿವೆ. *Diakonia* ಇತರರಿಗಾಗಿ ಎಲ್ಲಾ ಸೇವೆಗಳಿಗೆ, ಹಣದ ಜೊತೆಗಿನ ಸೇವೆಯನ್ನೂ ಒಳಗೊಂಡು ಇದು ಬಳಸಲ್ಪಡುತ್ತಿತ್ತು. *Leitourgia* ವಿಶೇಷವಾಗಿ ಸಾರ್ವಜನಿಕ ಸೇವೆಗಾಗಿ ಉಪಯೋಗಿತವಾಗುತ್ತಿತ್ತು. ರೋಮಾಪುರ 15:27ರಲ್ಲಿ, ಸಂಗ್ರಹದ "ಸೇವೆಯಲ್ಲಿರುವವರಿಗೆ" ಬಳಕೆಯಾಗಿದೆ. ಇದೇ ಪದವು ಫಿಲಿಪ್ಪಿ 2:30ರಲ್ಲಿ, ಬಳಕೆಯಾಗಿದ್ದು ಪೌಲನು ಎಫಫ್ರೋಧೀ ತನು ತನ್ನ ಜೀವವನ್ನೇ ಒತ್ತೇ ಇಟ್ಟು "ನೀವು ನನಗೆ ಮಾಡಬೇಕೆಂದಿರುವ ಉಪಚಾರದಲ್ಲಿ ಕಡಿಮೆಯಾದದ್ದನ್ನು ಪೂರ್ತಿಮಾಡಿದನು" ಎಂದು ಹೇಳುತ್ತಾನೆ.

## ಕೊಡುವವನಿಗೆ ವಾಗ್ದಾನ (9:12-14)

ಕೊಡುವ ಸೇವೆಯಿಂದ ಇರುವ ಪ್ರತಿಫಲವು ಯಾವದಾಗಿರುವದು? ಯಶಸ್ಸಿನ ಯಾವ ಸೂಚನೆಯು ಇಲ್ಲದೇ ಈ ಸೇವೆಯು ಮುಗಿದುಹೋಗುವುದನ್ನು ನಾವು ಬಯಸುವವರಾಗಿರುವುದಿಲ್ಲ. ಅನೇಕ ಸವಾಲುಗಳು ಕೊಡುವುದನ್ನು ಮತ್ತು ನಾವು ಪಾಲು ತೆಗೆದುಕೊಳ್ಳಬೇಕೆಂದಿರುವ ನ್ಯಾಯಬದ್ಧ ಸೇವೆಗಳನ್ನು ನಾವು ಯೋಚಿಸುವಾಗ, ಅವುಗಳು ಕಡಿಮೆ ವ್ಯತ್ಯಾಸವನ್ನು ಮಾಡುವಂಥವುಗಳಾದ ನಮ್ಮ ಸಂಪನ್ಮೂಲಗಳು ಅತ್ಯಲ್ಪವಾಗಿರುವವು ಎಂಬುದನ್ನು ನೆನಪಿಸುವದು ನಮಗೆ ಖಚಿತವಾಗಿದೆ. ನಮ್ಮ ಸಭೆಯ ಚಿಕ್ಕ ಸಂಪನ್ಮೂಲವು ರಾಷ್ಟ್ರವನ್ನು ಅಲ್ಪವಾಗಿ ಸೌವಾರ್ತಿಕರಿಸುವದಾಗಿದೆ. ಕೊರಿಂಥಿಯನ್ನರು ಯೆರೂಸಲೇಮಿನ ಸಹಾಯಕ್ಕಾಗಿನ ತಮ್ಮ ಕೊಡುಗೆಯ ಪರಿಣಾಮದ ಬಗೆಗೆ ಇದೇ ರೀತಿಯ ಪ್ರಶ್ನೆಯನ್ನು ಕೇಳಿದರು. ನಮ್ಮ ಸಂಪನ್ಮೂಲಗಳ ದೇವರು ಏನು ಮಾಡಬಲ್ಲವನಾಗಿದ್ದಾನೆ ಎಂಬುದನ್ನು ಪೌಲನು ನೆನಪಿಸುವುದರ ಜೊತೆಯಲ್ಲಿ ಈ ಸಂಶಯದ ಬಗೆಗೆ ಪ್ರತಿಕ್ರಯಿಸುವವನಾಗಿದ್ದಾನೆ. ತಾನು ಏನನ್ನು ಬಿತ್ತುತ್ತೇನೆ ಎನ್ನುವುದಕ್ಕಿಂತ ಬೆಳೆಯು ಶ್ರೇಷ್ಟವಾಗಿರಬೇಕೆಂಬ ವಿಶ್ವಾಸವು ರೈತನಿಗೆ ಮಾತ್ರವಿರುವಂತೆ, ನಮ್ಮ ಸೇವೆಯು ಕೇವಲ "ಬೀಜವನ್ನು ಬಿತ್ತುವದು" ಮಾತ್ರವಾಗಿದೆ

(9:6). ಉತ್ತಮ ಸುಗ್ಗಿಯ ಆಶ್ವಾಸನೆಯನ್ನು ಕೊಡುವವನು ದೇವರದ್ದಾಗಿದೆಯೇ, ಹೊರತು ನಮ್ಮ ಸಂಪನ್ಮೂಲವಲ್ಲ (9:10).

ಯೇಸುವಿನ ಶಿಷ್ಯರು ಐದು ಸಾವಿರ ಹಸಿದ ಜನರನ್ನು ಎದುರಿಸಿದಾಗ, "ನೀವೇ ಅವರಿಗೆ ಊಟಕ್ಕೆ ಕೊಡಿರಿ" (ಮಾರ್ಕ 6:37) ಎಂಬ ಯೇಸುವಿನ ಈ ಸವಾಲನ್ನು ಕೇಳಿ ಅವರು ಸ್ಥಂಭಿಭೂತರಾಗಿದ್ದರು. ಮಹತ್ವದ ಪ್ರಯತ್ನಕ್ಕೆ ಅವರ ಈ ಸಂಪನ್ಮೂಲಗಳು ನಿಶ್ಚಿತವಾಗಿ ಸಾಕಾಗದ್ದಾಗಿತ್ತು. ಆದರೆ ಯೇಸುವು ಆ ಕ್ಷುಲ್ಲಕವಾದ ಸಂಪನ್ಮೂಲವನ್ನು ತೆಗೆದುಕೊಂಡನು ಮತ್ತು ಜನಸಮೂಹಕ್ಕೆ ಉಣಿಸಿದನು. ಅದರ ಫಲಿತಾಂಶವು "ಅವರೆಲ್ಲರೂ ಊಟಮಾಡಿ ತೃಪ್ತರಾದರು" ಎಂಬುದೇ ಆಗಿತ್ತು (ಮಾರ್ಕ 6:42). ದೇವರ ಕೃಪೆಯಿಂದ ಅವನ ಕೈಯಲ್ಲಿನ ಅಲ್ಪವಾದ ಸಂಪನ್ಮೂಲವು ಹೆಚ್ಚಾಯಿತು. ಇದು ನಮ್ಮ ಸೇವೆಯೊಡನೆಯೂ ಸಹ ಸಂಭವಿಸಬಹುದೆಂದು ಪೌಲನು ಹೇಳುತ್ತಾನೆ. ನಾವು ಕೇವಲ ಇತರರಿಗೆ ಸಹಾಯಮಾಡುವವರಾಗಿರುವದಿಲ್ಲ; ನಮ್ಮ ತ್ಯಾಗವು ಸಾಂಕ್ರಾಮಿಕದಂತಿದ್ದು "ಅನೇಕರಿಂದ ದೇವರಿಗೆ ಕೃತಜ್ಞತಾ ಸ್ತುತಿಯನ್ನು ಹುಟ್ಟಿಸುವುದು" (9:12) ಎಂದು ಪೌಲನು ಹೇಳುತ್ತಾನೆ. ನಾವು ಹೊಂದಿಕೊಂಡಿದ್ದನ್ನು ಹಂಚಿಕೊಳ್ಳುತ್ತೇವೆ (9:14).

## ಮುಕ್ತಾಯ

ಯಾವಾಗ "ಅವಶ್ಯವಿಲ್ಲ" ಎಂದು ಎಲ್ಲಿ ಕಾಣಬಹುದೆಂದರೆ (9:1) ಹಣದ ಬಗೆಗೆ ಬರೆಯುವುದನ್ನು ಮತ್ತು ಮಾತನಾಡುವುದನ್ನು ಮುಂದುವರೆಸಿದಾಗಲೇ, ಅಧಿಕೃತ ಶಿಷ್ಯರಲ್ಲಿ ಇದಕ್ಕೆ ಒಂದು ಸ್ಥಾನ ಇದೆ ಎಂಬುದನ್ನು ಪೌಲನು ಬಲ್ಲವನಾಗಿದ್ದನು. ನಾವು ಕೇವಲ ಕಾರ್ಯಕ್ರಮ ಮತ್ತು ಬಾಬತ್ತಿನ ಬಗೆಗೆ ಮಾತನಾಡುವಾಗ, ನಾವು ಸೇವೆಗಳತ್ತಿನ ಲಕ್ಷವನ್ನು ಕಳಕೊಳ್ಳುತ್ತೇವೆ ಮತ್ತು ಕೊಡುವುದರ ಮೂಲಕ ನಾವು ಇತರರಿಗೆ ಏನಾಗಿದ್ದೇವೆ ಎಂಬುದನ್ನು "ನಮ್ಮನ್ನೇ ನಾವು ಕೊಡುವುದರಲ್ಲಿ" ಮರೆತುಬಿಡುತ್ತೇವೆ. ಈ ಸಮಯದಲ್ಲಿ ನಾವು ಇತರರಿಗಾಗಿ ತ್ಯಾಗ ಮಾಡಿರುವುದನ್ನು ಹೃದಯದ ದೃಢಸಂಕಲ್ಪದಲ್ಲಿ ಮತ್ತು ನಮ್ಮ ಜೀವಿತದ ಆದ್ಯತೆಗಳಲ್ಲಿ ನಾವು ಪ್ರಯೋಗಿಸುವುದನ್ನು ನಾವು ಕಂಡುಕೊಳ್ಳುತ್ತೇವೆ.